**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ. ಸಂಖ್ಯೆ.2633/2021**

ಪಿರ್ಯಾದುದಾರರು : ಸರ್ಕಾರದ ಪರವಾಗಿ ಕಡೂರು ಪೊಲೀಸರಿಂದ

**-ವಿರುದ್ದ-**

ಆರೋಪಿತರು : ಎಸ್.ಎಂ.ಶಿವರಾಜ್ ಬಿನ್ ಮಹಾಲಿಂಗಪ್ಪ, ಸುಮಾರು 30 ವರ್ಷ, ವ್ಯವಸಾಯ, ವಾಸ : ಮೋಟಾರ್ ಸೈಕಲ್ ನಂ.ಕೆಎ-18-ಯು-8711 ರ ಚಾಲಕ, ವಾಸ : ಹಳೇ ಸಿದ್ದರಹಳ್ಳಿ ಗ್ರಾಮ, ಎಮ್ಮೆದೊಡ್ಡಿ ಅಂಚೆ, ಕಡೂರು ತಾಲ್ಲೂಕು.

**-: ಆ ಪಾ ದ ನೆ:-**

ದಿನಾಂಕ 24.06.2021 ರಂದು ಮಧ್ಯಾಹ್ನ 1.45 ಗಂಟೆ ಸಮಯದಲ್ಲಿ ಕಡೂರು ಠಾಣಾ ಸರಹದ್ದಿನ ವಿ.ಸಿದ್ದರಹಳ್ಳಿ ಗ್ರಾಮದ ಮೋಹನ್ ಕುಮಾರ್ ರವರ ವಾಸದ ಮನೆಯ ಮುಂದೆ ಹಾದು ಹೋಗಿರುವ ಕಡೂರು - ಬಾಸೂರು ಟಾರು ರಸ್ತೆಯಲ್ಲಿ ಚಾಸಾ-1 ಪುಟ್ಟಪ್ಪರವರ ತಂದೆ ಮೃತ ಎಸ್.ಜಿ.ರಾಮಕೃಷ್ಣಪ್ಪ ರವರು ತನ್ನ ಮಗನಾದ ಗಂಗಾಧರರವರು ಗ್ರಾಮದಲ್ಲಿ ನಿರ್ಮಾಣ ಮಾಡುತ್ತಿರುವ ಮನೆಯ ನಿರ್ಮಾಣ ಕಾಮಗಾರಿಯನ್ನು ನೋಡಿಕೊಂಡು ತಮ್ಮ ಮನೆಯ ಕಡೆ ನಡೆದುಕೊಂಡು ಬರುತ್ತಿರುವಾಗ, ಆರೋಪಿಯಾದ ನೀನು ಮೋಟಾರ್ ಸೈಕಲ್ ನಂ.ಕೆಎ-18-ಯು-8711 ರ ವಾಹನವನ್ನು ಕಡೂರು ಕಡೆಯಿಂದ ಅತಿ ವೇಗ ಮತ್ತು ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬಲಬದಿಗೆ ಹೋಗಿ ನಡೆದುಕೊಂಡು ಹೋಗುತ್ತಿದ್ದ ಎಸ್.ಜಿ.ರಾಮಕೃಷ್ಣರವರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಅತಿ ವೇಗ ಮತ್ತು ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಮೇಲ್ಕಂಡ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ರಸ್ತೆಯ ಬಲಬದಿಗೆ ಹೋಗಿ ನಡೆದುಕೊಂಡು ಹೋಗುತ್ತಿದ್ದ ಎಸ್.ಜಿ.ರಾಮಕೃಷ್ಣರವರಿಗೆ ಡಿಕ್ಕಿಪಡಿಸಿದ ಪರಿಣಾಮ, ರಾಮಕೃಷ್ಣರವರು ರಸ್ತೆಯ ಮೇಲೆ ಬಿದ್ದು ಅವರ ತಲೆಗೆ, ಮುಖಕ್ಕೆ ಮತ್ತು ಎದೆಗೆ ತೀವ್ರ ಸ್ವರೂಪದ ಗಾಯಗಳಾಗಿ ಮೃತಪಡಲು ಕಾರಣರಾಗಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉ:

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉ: ತಿಳಿಯಿತು

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಉ: ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು.

ದಿನಾಂಕ: 17 ನೇ ಫೆಬ್ರವರಿ 2024. -ಸಹಿ-

(ರಾಮ್ ಪ್ರಶಾಂತ್ ಎಂ.ಎನ್.),
ಪ್ರಧಾನ ಪ್ರದನ್ಯಾದಂ., ಕಡೂರು.